**(ದಿಃ27.11.2025 ಮತ್ತು 05.02.2023 ರ ಮಧ್ಯಂತರ ಅರ್ಜಿ ಸಂಖ್ಯೆ 5 ರಿಂದ 7 ರ ಮೇಲೆ ಆದ ಆದೇಶದ ಅನ್ವಯ)**

**ಸಾಕ್ಷಿಗೆ ದಿನಾಂಕಃ12-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**: ಮುಂದುವರೆದ ಪಾಟೀ ಸವಾಲು :: 1 ಮತ್ತು 3 ನೇ ಪ್ರತಿವಾದಿ ಪರ ಶ್ರೀ. ವಕೀಲರಿಂದ :**

ನನಗೆ 54 ವರ್ಷ ವಯಸ್ಸಾಗಿದ್ದು ನನ್ನ ಜನ್ಮ ದಿನಾಂಕ 15.05.1972 ಆಗಿರುತ್ತದೆ. ನಾನು ನನ್ನ ವಿದ್ಯಾಭ್ಯಾಸವನ್ನು ಚಿಕ್ಕಬಳಿಕೆರೆ ಶಾಲೆಯಲ್ಲಿ ಮಾಡಿರುತ್ತೇನೆ. ಸದರಿ ಊರು ನನ್ನ ತಾಯಿಯ ತವರು ಮನೆ ಆಗಿರುತ್ತದೆ ಎಂದರೆ ಸರಿ. ನಾನು ಪ್ರೌಢ ಶಾಲೆವರೆಗೂ ಅಲ್ಲೀಯೇ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಐ ಟಿ ಐ ಅನ್ನು ಹೊಸದುರ್ಗದಲ್ಲಿ ಮಾಡಿರುತ್ತೇನೆ. ನಾನು ಐ ಟಿ ಐ ಅನ್ನು 2 ವರ್ಷದ ವಿದ್ಯಾಭ್ಯಾಸ ಮಾಡಿರುತ್ತೇನೆ. ಸದರಿ ಐ ಟಿ ಐ ಗಾಗಿ ನಾನು ಒಂದು ವರ್ಷ ಮನೆಯಿಂದ ಓಡಾಡಿದ್ದು ಮತ್ತೊಂದು ವರ್ಷ ಹೊಸದುರ್ಗದಲ್ಲಿ ಇದ್ದೆ ಎಂದರೆ ಸರಿ. ಐ ಟಿ ಐ ಮುಗಿದ ನಂತರ ನಾನು ನೇರವಾಗಿ ಕೆಲಸಕ್ಕೆ ಬೆಂಗಳೂರಿಗೆ ಹೋಗಿರುತ್ತೇನೆ. ಸದರಿ ಸಮಯದಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಮೊದಲಿಗೆ ವಿದ್ಯಾಭ್ಯಾಸವನ್ನು ತಗ್ಗಿನಹಳ್ಳಿಯಲ್ಲಿ ಮಾಡಿದ್ದು ನಂತರ ಅವರು ಸಹ ಚಿಕ್ಕಬಳ್ಳೆಕೆರೆಯಲ್ಲಿ ಮಾಡಿರುತ್ತಾರೆ. ನಾನು 1988-90 ವರೆಗೂ ಹೊಸದುರ್ಗದಲ್ಲಿ ಐ ಟಿ ಐ ಮಾಡಿರುತ್ತೇನೆ. ಸದರಿ ಸಮಯದಲ್ಲಿ ನನ್ನ ತಂದೆ ಹಾಗೂ ಚಿಕ್ಕಪಂದಿರು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿ. 2008 ರಲ್ಲಿ ನಮ್ಮ ಹಾಗೂ ನಮ್ಮ ಚಿಕ್ಕಪಂದಿರ ನಡುವೆ ವಿಭಾಗ ಆಗಿರುತ್ತದೆ ಎಂದರೆ ಸರಿ. ಅದಕ್ಕೂ ಪೂರ್ವದಲ್ಲಿ ನಮಗೆ ಆಸ್ತಿಗಳ ಬಗ್ಗೆ ಜಗಳ ಇತ್ತು ಎಂದರೆ ಸರಿಯಲ್ಲ. ಸದರಿ ವಿಭಾಗದ ಅಡಿಯಲ್ಲಿ ನನ್ನ ತಂದೆಯ ಭಾಗಕ್ಕೆ ಪಿತ್ರಾರ್ಜಿತ ಆಸ್ತಿ ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ 6 ಆಸ್ತಿಗಳು ಬಸವಪುರ ಗ್ರಾಮಕ್ಕೆ ಸೇರಿದ್ದು ಒಂದು ಆಸ್ತಿ ಬೀರನಹಳ್ಳಿ ಗ್ರಾಮಕ್ಕೆ ಸೇರಿರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ diploma ಮಾಡಿರುತ್ತಾರೆ. ಸದರಿಯವರನ್ನು ನನ್ನ ಅಜ್ಜಿ ಓದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸಹ ತಕ್ಕಮಟ್ಟಿಗೆ ಅವರ ವಿದ್ಯಾಭ್ಯಾಸ ಶುಲ್ಕವನ್ನು ಪಾವತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

3 ನೇ ಪ್ರತಿವಾದಿ ನಾನು ಐ ಟಿ ಐ ಮಾಡುವ ಸಮಯದಲ್ಲಿ ಏನು ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದು ನನಗೆ ನೆನಪಿಲ್ಲ.

ನಮ್ಮ ಕುಟುಂಬದವರು ಬೀರನಹಳ್ಳಿ ಸರ್ವೇ ನಂಬರ್ 47 ರಲ್ಲಿ 2 ಎಕರೆ ಆಸ್ತಿಯನ್ನು ಬಗರ್ ಹುಕ್ಕುಂ ಅಡಿಯಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಕೇವಲ ಒಟ್ಟು ಕುಟುಂಬದ ಅಸ್ತಿಯನ್ನು ಮಾತ್ರ ಸೇರಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಹಾಗೂ ಪ್ರತಿವಾದಿಗಳ ಯಾವುದೇ ಸ್ವಯಾರ್ಜಿತ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಮೇಲೆ ಹೇಳಿದ ಸರ್ವೇ ನಂಬರ್ 47 ರ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಸದರಿ ಆಸ್ತಿ ಸಹ ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯ ಪಹಣಿ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಬೀರನಹಳ್ಳಿ ಗ್ರಾಮದ ಸರ್ವೇ ನಂಬರ್ 64 ರಲ್ಲಿ 1 ಎಕರೆ 7 ಗುಂಟೆ ಜಮೀನು ಅನ್ನು ನನ್ನ ತಂದೆ 1994-95 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದಕ್ಕೆ ನಾನು ಸಹ ಹಣ ನೀಡಿರುತ್ತೇನೆ. ಹಣ ನೀಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಕಾರಣ ಅದನ್ನು ನಗದಾಗಿ ಕೈಯಲ್ಲಿ ನೀಡಿರುತ್ತೇನೆ. ಸದರಿ ಸಮಯದಲ್ಲಿ ನಾನು 75 ಸಾವಿರ ಹಣವನ್ನು ನನ್ನ ತಂದೆಗೆ ನೀಡಿರುತ್ತೇನೆ. ಸದರಿ ಆಸ್ತಿಯ ಪತ್ರದಲ್ಲಿ ಹಣ ನೀಡಿರುವ ವಿಚಾರ ಬರೆಸಿರುವುದಿಲ್ಲ ಎಂದರೆ ಸರಿ.

3 ನೇ ಪ್ರತಿವಾದಿ diploma ನಂತರ ಬೇರೆ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಾನು ಖರಿದಿ ಮಾಡಿರುವ ಬೆಂಗಳೂರಿನ ಆಸ್ತಿಗಳನ್ನು ನಮ್ಮ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಕೂಲಿ ಹಾಗೂ ಗುತ್ತಿಗೆಯನ್ನು ನಮ್ಮ ಊರಿನಲ್ಲಿ ಬೇರೆಯವರ ಆಸ್ತಿಯಲ್ಲಿ ಮಾಡುತ್ತಿದ್ದರು. ನನ್ನ ತಂದೆಯವರು ಅವರ ಸ್ವಯಾರ್ಜಿತ ಸ್ವತ್ತುಗಳನ್ನು ದುರುದ್ದೇಶದಿಂದ ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ವಯಸ್ಸಾಗಿದ್ದರೂ ಸಹ ನಾನು ಅವರನ್ನು ನೋಡಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ.

**: ಪಾಟೀ ಸವಾಲು :: 2 ನೇ ಪ್ರತಿವಾದಿ ಪರ ವಕೀಲರಿಂದ :**

**(ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ, ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: